ಶ್ರೀ ಬಿ.ಸತ್ಯನಾರಾಯಣ : ಈಗಾಗಲೇ ಹೇಮಾವತಿ ನಾಲೆಯಿಂದ ತುಮಕೂರಿಗೆ ನೀರನ್ನು ನಾವು ಕೊಡುತ್ತಿದ್ದೇವೆ. ಅದರ ಬಗ್ಗೆ ಸದಸ್ಯರು ಹೇಳಿದ ಹಾಗೆ, ಅದನ್ನು ನಾನು ನಮ್ಮ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಚಿವರು ಏನು ಉತ್ತರ ಕೊಡುತ್ತಾರೆ?....

ಅಧ್ಯಕ್ಷರು : ಈಗ ಮಾನ್ಯ ಶರಣಪ್ಪ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರ ಪ್ರಶ್ನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಒಂದು ನಿಮಿಷ ಸಾರ್.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರು ತಾವು ದಯಮಾಡಿ ಕುಳಿತುಕೊಳ್ಳಬೇಕು.

Sri J.C.Madhuswamy : I am on a point of order.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ಮಾನ್ಯ ಶರನ ಪ್ರಕಾಶ್ ರುದ್ರಪ್ಪನವರು ತಮ್ಮ ಪ್ರಶ್ನೆ ಕೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ...ಮಾನ್ಯ ಸಚಿವರು ಉತ್ತರ ಈ ರೀತಿ ಹೇಳಿದರೆ ಹೇಗೆ ಸಾರ್?...

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮಾಧುಸ್ವಾಮಿಯವರೇ, ತಮ್ಮಂತಹ ಹಿರಿಯ ಸದಸ್ಯರೇ ಈ ರೀತಿ ನಿಂತುಕೊಂಡರೆ ಹೇಗೆ? ನಾನು ಪ್ರಶ್ನೋತ್ತರ ಹೇಗೆ ನಡೆಸುವುದು?

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಸಚಿವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ. ದಯವಿಟ್ಟು ನಾನು ಹೇಳುವುದು ಕೇಳಿ. KUWSSB ಯಿಂದ pump ಮಾಡುತ್ತಿರುವ ನೀರನ್ನೇ ನಾವು ತಿಪಟೂರಿಗೆ drinking water ಆಗಿ ಕೊಟ್ಟಿದ್ದೇವೆ. ಆ ನೀರಿನಿಂದ ನಾನು ಹರಿಸುತ್ತೇನೆಂದು ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟರೆ ನಾಳೆ ಏನಾಗುತ್ತದೆ? ಸಾರ್. ಗೊತ್ತಿಲ್ಲದೆ ಮಾತನಾಡಿದರೆ ನಾವು ಅದನ್ನು ಕೇಳಿಸಿಕೊಂಡು ಸುಮ್ಮನೆ ಕುಳಿತುಕೊಂಡಿರಬೇಕೇ ಸಾರ್. ನಾಲೆಗೆ ನೀರು ಬರುತ್ತಿಲ್ಲ. ಈಚನೂರಿನಿಂದ ಕೆರೆಗೆ ನೀರನ್ನು ಪಂಪ್ ಮಾಡಿ ತಿಪಟೂರಿಗೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಿ, ಅಲ್ಲಿಂದ ಹರಿಸಲಿಕ್ಕೆ ಸಾಧ್ಯವೇ?

ಅಧ್ಯಕ್ಷರು : ಅದಕ್ಕೆ ಬೇರೆ ಪ್ರಶ್ನೆಯನ್ನು ಕಳುಹಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಿನಿಸ್ಟರ್ ಆ ರೀತಿ ಹೇಳಿದರೆ, ನಾವು ಅದನ್ನು ಕೇಳಿಕೊಂಡು ಸುಮ್ಮನಿರಬೇಕೇ?

ಅಧ್ಯಕ್ಷರು : ನನ್ನ ಸಮಸ್ಯೆ ಎಂದರೆ, ಪ್ರಶ್ನೋತ್ತರ ಮುಗಿಯಬೇಕು. ಗೊತ್ತಾಯಿತೇ? ಆದುದರಿಂದ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ... ಅವರು ಆ ರೀತಿ ಉತ್ತರ ಕೊಟ್ಟರೆ ನಮ್ಮ ಗತಿಯೇನು?

ಖಾಸಗಿ ಶಾಲಾ ಕಾಲೇಜುಗಳಲ್ಲಿ ಅನುಕಂಪದ ಆಧಾರದ ಮೇಲೆ ಸಿಬ್ಬಂದಿ ನೇಮಕಾತಿ.

95 (555) ಡಾ: ಶರಣಪ್ಪಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಖಾಸಗಿ ಶಾಲಾ /ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಶಿಕ್ಷಕೇತರರು ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತ ಪಟ್ಟರೆ ಅವರ ಕುಟುಂಬ ವರ್ಗದವರಿಗೆ ಅನುಕಂಪ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರವು ಅನುಮತಿ ಕೊಡುತ್ತದೆಯೆ;

ಆ. ಈ ಸೌಲಭ್ಯ ಸರ್ಕಾರಿ ಸಿಬ್ಬಂದಿಗಳಿಗೆ ಲಭ್ಯವಿರುವುದರಿಂದ ಅದನ್ನು ಅನುದಾನಕ್ಕೆ ಒಳಗಾಗಿರುವ ಖಾಸಗಿ ಸಂಸ್ಥೆಗಳಲ್ಲೂ ಕೂಡ ಅನುಸರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ. ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಶಿಕ್ಷಕೇತರರು ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತ ಪಟ್ಟರೆ ಅವರ ಕುಟುಂಬ ವರ್ಗದವರಿಗೆ ಅನುಕಂಪ ಆಧಾರದ ಮೇಲೆ.ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರವು ಅನುಮತಿ ನೀಡಿರುತ್ತದೆ, ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಆಡಳಿತ ಮಂಡಳಿಯ ನೇರ ನಿಯಂತ್ರಣ ಕ್ಕೊಳಪಟ್ಟಿರುವುದರಿಂದ ಅನುಕಂಪದ ಆಧಾರದ ಮೇಲೆ ಕೆಲಸ ನೀಡಲು ಸರ್ಕಾರದ ಅನುಮತಿ ಅಗತ್ಯವಿರುವುದಿಲ್ಲ.

ಆ. ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ : 29–01–2004ರ ಸುತ್ತೋಲೆ ಸಂಖ್ಯೆ: ಇಡಿ 97 ಎಸ್.ಎಲ್.ಬಿ 2004 ರನ್ವಯ ಈ. ಕುರಿತು ಸ್ಪಷ್ಟೀಕರಣ ನೀಡಲಾಗಿದೆ.

ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಸೌಲಭ್ಯಗಳನ್ನು ಸರ್ಕಾರವು ಈ ಹಿಂದೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಿತ್ತು. ಆದರೆ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಸರ್ಕಾರದ ಪತ್ರ ಸಂಖ್ಯೆ: ಇಡಿ 246 ಯುಪಿಸಿ 2001, ದಿನಾಂಕ: 1–02–2002ರನ್ವಯ ಸ್ಥಗಿತಗೊಳಿಸಲಾಗಿರುತ್ತದೆ ಮತ್ತು ಸರ್ಕಾರಿ ಆದೇಶ ಸಂಖ್ಯೆ ಇಡಿ 196 ಯುಪಿಸಿ 2001, ದಿನಾಂಕ: 1–03–2001 ರಲ್ಲಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದಿನಾಂಕ: 1–3–2001 ರಿಂದ ಖಾಲಿಯಾಗುವ ಎಲ್ಲಾ ಹುದ್ದೆಗಳನ್ನು ಅನುದಾನ ರಹಿತವೆಂದು ಪರಿಗಣಿಸಲು ಆದೇಶಿಸಿತ್ತು. ನಂತರ ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಡಿಲಿಸಲಾಗಿದೆ. ಬೋಧಕೇತರ ಹುದ್ದೆಗಳ ಬಗ್ಗೆ ಇದನ್ನು ಸಡಿಲಿಸಲಾಗಿರುವುದಿಲ್ಲ.

ಡಾ: ಶರಣಪ್ಪ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಇಲಾಖೆಯಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳೇನಿವೆ, ಅವುಗಳಲ್ಲಿ compassionate grounds ಮೇಲೆ ನೌಕರಿ ಕೊಡತಕ್ಕಂಥದ್ದರ ಬಗ್ಗೆ ನಾನು ಕೇಳಿದ್ದೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನಾವು ಅನುಮತಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ಕೇವಲ ಅನುಮತಿ ಕೊಟ್ಟರೆ ಮಾತ್ರ ಸಾಲದು. ಅನುದಾನಕ್ಕೆ ಒಳಗಾಗಿರತಕ್ಕಂಥ ಶಿಕ್ಷಣ ಸಂಸ್ಥೆಗಳಲ್ಲಿ ಯಾರದರೂ ತೀರಿ ಹೋದರೆ, ಯಾವ ರೀತಿಯಾಗಿ com passionate grounds ಮೇಲೆ ಸರ್ಕಾರದಲ್ಲಿ ನೌಕರಿ ಕೊಡುತ್ತಿದ್ದೇವೋ, ಆ ರೀತಿಯಲ್ಲಿ ಕೊಡುತ್ತೀರಾ? ಒಂದು ವೇಳೆ ಶಿಕ್ಷಣ ಸಂಸ್ಥೆಯವರು ಅವರನ್ನು ಬಿಟ್ಟು ಬೇರೆ ಯಾರನ್ನಾದರೂ

ನೇಮಕಾತಿ ಮಾಡಿದರೆ ನೀವೇನು ಮಾಡುತ್ತೀರಿ? ಆದ್ದರಿಂದ ಕೇವಲ ನೀವು ಅನುಮತಿ ಕೊಡುವುದಲ್ಲ, mandatory ಆಗಿ ಇದೇ ಸೌಲಭ್ಯವನ್ನು ಅನುದಾನಕ್ಕೆ ಒಳಗಾಗಿರತಕ್ಕಂಥ ಶಿಕ್ಷಣ ಸಂಸ್ಥೆಗಳಲ್ಲೂ ಸಹ ಜಾರಿಗೆ ತರಬೇಕು ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಕೇವಲ ಅನುಮತಿ ಕೊಡುವುದಲ್ಲ, mandatory ಆಗಿ ಯಾವ ರೀತಿಯಾಗಿ ನಾವು ಸರ್ಕಾರದಲ್ಲಿ ನೌಕರಿಯನ್ನು ಕೊಡುವಂತಹ ಸೌಲಭ್ಯವನ್ನೇನು ಕೊಡುತ್ತಿದ್ದೇವೋ, ಅದೇ ರೀತಿಯ ಸೌಲಭ್ಯಗಳನ್ನು ಅನುದಾನಕ್ಕೆ ಒಳಗಾಗಿತಕ್ಕಂಥ ಸಂಸ್ಥೆಗಳಲ್ಲಿ ತೀರಿ ಹೋದವರ ಕುಟುಂಬದವರಿಗೂ ಸಹ ಕೊಡಬೇಕು. ಎರಡನೆಯದಾಗಿ, ನನ್ನ ಎರಡನೇ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸುತ್ತಾ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೆಲವೊಂದಕ್ಕೆ ತೆಗೆದು ಹಾಕಿದ್ದೇವೆ ಅಥವಾ ಸ್ಥಗಿತಗೊಳಿಸಿದ್ದೇವೆ ಎಂದು ಹೇಳಿದ್ದಾರೆ. 'ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಡಿಲಿಸಲಾಗಿದೆ, ಬೋಧಕೇತರ ಹುದ್ದೆಗಳ ಬಗ್ಗೆ ಇದನ್ನು ಸಡಿಲಿಸಲಾಗಿರುವುದಿಲ್ಲ' ಎಂದು ಮಾನ್ಯ ಸಚಿವರು ತಮ್ಮ ಉತ್ತರದ ಕೊನೆಯಲ್ಲಿ ತಿಳಿಸಿದ್ದಾರೆ. ಬೋಧಕೇತರ ಹುದ್ದೆಗಳಲ್ಲಿರುವಂತಹ ನೌಕರರಿಗೂ ಸಹ ಈ ಸೌಲಭ್ಯವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು : ಶಿಕ್ಷಣ ಸಚಿವರು ಸದನಕ್ಕೆ ಬಂದರು.

ಅಧ್ಯಕ್ಷರು : ಈಗಾಗಲೇ ಮಾನ್ಯ ಉನ್ನತ ಶಿಕ್ಷಣ ಸಚಿವರು ತಮಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಿದ್ದಾರೆ. ಅದಾದ ನಂತರ ಅವರಿಗೆ ಸಂಬಂಧಿಸಿದ ಪ್ರಶ್ನೆಯನ್ನು ನಾನು ತೆಗೆದುಕೊಳ್ಳುತ್ತೇನೆ. ಈಗ ಕುಳಿತುಕೊಳ್ಳಿ.

ಶ್ರೀ ಡಿ.ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಗೊತ್ತಾಯಿತು. ಅನುದಾನಿತ ಶಾಲೆಗಳಲ್ಲಿ ಇದ್ದವರಿಗೂ compassionate grounds appointment ಕೊಡಬೇಕೆಂದು ಅವರು ಕೇಳುತ್ತಿದ್ದಾರೆ. ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ನಾವು ಕೊಡುತ್ತಿದ್ದೆವು. ಅದು ಇತ್ತೀಚೆಗೆ ಸ್ಥಗಿತಗೊಳಿಸಲು ಆರ್ಡರ್ ಆಗಿದೆ. ಅದರ ಬಗ್ಗೆ ನಾನು ನೋಡುತ್ತೇನೆ. Non-teaching ನವರಿಗೂ ಸಡಿಲಿಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಡಾ: ಶರಣಪ್ಪ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮೊದಲನೇ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ, ಆಯಾ ಸಂಸ್ಥೆಯಿಂದ ಪ್ರಸ್ತಾವನೆ ಬಂದರೆ ಅದಕ್ಕೆ ಸರ್ಕಾರ ಅನುಮೋದನೆ ಕೊಡುತ್ತದೆ ಎಂದು ಹೇಳಿದ್ದಾರೆ. ಅನುಮೋದನೆ ಕೊಡುವುದಲ್ಲ, ಅದು mandatory ಆಗಬೇಕೆಂದು ಮಾನ್ಯ ಸಚಿವರಲ್ಲಿ ನನ್ನ ಮನವಿ. ಶಿಕ್ಷಣ ಸಂಸ್ಥೆಯವರು ತೀರಿ ಹೋಗಿರತಕ್ಕಂಥ ನೌಕರರ ಕುಟುಂಬದವರನ್ನು ಬಿಟ್ಟು ಬೇರೆ ಯಾರಿಗಾದರೂ ನೇಮಕಾತಿ ಕೊಡತಕ್ಕಂಥ ಪ್ರಸ್ತಾವನೆಯನ್ನು ಕಳುಹಿಸಬಹುದು . ಅಂತಹ ಸಂದರ್ಭದಲ್ಲಿ compassionate grounds ಮೇಲೆ ನೀವು ಕೊಡುತ್ತೇವೆ ಎಂಬ ಆಶ್ವಾಸನೆ ಕೊಡಬೇಕು.

ಶ್ರೀ ಡಿ.ಮಂಜುನಾಥ್ : ಮಾನ್ಯ ಸದಸ್ಯರು ಹೇಳಿದ್ದು ಸರಿಯೇ. ಅವರನ್ನು ಬಿಟ್ಟು ಬೇರೆಯವರನ್ನು ಕಳುಹಿಸುತ್ತಾರೆ. ಅದೆಲ್ಲಾ ಆಗುತ್ತಿದೆ. ಅನುದಾನಿತ ಕಾಲೇಜುಗಳಲ್ಲಿ ಮತ್ತು

ಪ್ರೈವೇಟ್ ಕಾಲೇಜುಗಳಲ್ಲಿ ಯಾರು actual ಆಗಿ ಇರುತ್ತಾರೋ, ಅವರನ್ನು ಬಿಟ್ಟು ಬೇರೆಯವರನ್ನು ನೇಮಕಾತಿ ಮಾಡಲು ಪ್ರಸ್ತಾವನೆ ಕಳುಹಿಸುವುದು ಇದೆ. ಅದೆಲ್ಲಾ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ಜಿಲ್ಲಾ ಪಂಚಾಯಿತಿಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ

96(1196) ಶ್ರೀ.ಬಸವರಾಜು. ಹೆಚ್.ಡಿ.(ವಿರಾಜಪೇಟೆ) ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಹಾಗೂ ಗ್ರಾಮಪಂಚಾಯ್ತಿಗಳಿಗೆ ನಿಗಧಿಯಾದ ಹಣ ಎಷ್ಟು, ಬಿಡುಗಡೆಯಾದ ಹಣ ಎಷ್ಟು, ಇದರಲ್ಲಿ ವೆಚ್ಚವಾಗಿರುವ, ಬಾಕಿ ಉಳಿದಿರುವ ಹಣವೆಷ್ಟು;

ಆ. ಈ ಮೇಲಿನೆಲ್ಲಾ ಪಂಚಾಯಿತಿಗಳ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ, ಪೂರ್ಣಗೊಳ್ಳದಿರುವುದೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ. ಸದರಿ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರ, ಅಕ್ರಮಗಳು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬಂದಿದ್ದಲ್ಲಿ, ಈ ಎಲ್ಲಾ ಅಕ್ರಮಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ. ಅವ್ಯವಹಾರಕ್ಕೊಳಗಾಗಿರುವ ಹಣ ಎಷ್ಟು;

ಊ. ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆಯೇ;

ಋ. ಈ ಕುರಿತು ತನಿಖೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಯಾವ ಹಂತದಲ್ಲಿದೆ ?

ಶ್ರೀ.ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು)

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳು ಅವುಗಳಿಂದ ಅನುಮೋದಿತವಾದ ವಾರ್ಷಿಕ ಕ್ರಿಯಾ ಯೋಜನೆಯನ್ವಯ ವಿವಿಧ ಇಲಾಖೆಗಳ/ವಲಯಗಳ ಅಡಿಯಲ್ಲಿ 654 ಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿವೆ. 27 ಜಿಲ್ಲಾ ಪಂಚಾಯತ್‌ಗಳು, 176 ತಾಲ್ಲೂಕು ಪಂಚಾಯತ್‌ಗಳು ಮತ್ತು 5653 ಗ್ರಾಮ ಪಂಚಾಯತ್‌ಗಳು ಕಳೆದ 3 ವರ್ಷಗಳಲ್ಲಿ ಪೂರ್ಣಗೊಳಿಸಿರುವ, ಪೂರ್ಣಗೊಳ್ಳದಿರುವ ಕಾಮಗಾರಿಗಳ ವಿವರಗಳು ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಇ. ಹೌದು.

ಈ. ಸರ್ಕಾರದ ಗಮನಕ್ಕೆ ಬಂದಿರುವ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಉ. ಸರ್ಕಾರದ ಕ್ರಮ ಪ್ರಾರಂಭಿಸಿದ ಪ್ರಕರಣಗಳಲ್ಲಿ ಅವ್ಯವಹಾರಕ್ಕೊಳಗಾದ ಮೊತ್ತ ರೂ. 4,84,21,876–00 ಇರುತ್ತದೆ.